ಯಾವ ರೇಟ್‌ನಲ್ಲಿ ತೆಗೆದುಕೊಳ್ಳುತ್ತಾರೆ, ಇದಕ್ಕೆ ಸಪೋರ್ಟ್ ಪ್ರೈಸ್ ಕೊಡುತ್ತೀರಾ ಎಂಬುದರ ಬಗ್ಗೆ ಏನಾದರೂ ಗೊತ್ತಿರಬೇಕಲ್ಲಾ. ಇವತ್ತಿನ ದಿವಸ ಇಂತಹ ರೇಟಿಗೆ ಹತ್ತಿ ತೆಗೆದುಕೊಳ್ಳುತ್ತೇವೆ ಇಂತಹ ರೇಟಿಗೆ ನಾವು ಮಾರುತ್ತೇವೆ ಎಂದು ಹೇಳುವುದು ಅತಿ ಅಗತ್ಯ. ಇವತ್ತಿನ ದಿವಸ ಫೆಡರೇಷನ್‌ಗೆ ರೊಕ್ಕ ಕೊಟ್ಟರೆ ಮಾಡುತ್ತಾರೆ ಎಂದರೆ ಹೇಗೆ? ಸರ್ಕಾರದವರು ರೊಕ್ಕ ಕೊಡಬೇಕು. ಏಕೆ ಕೊಡಬಾರದು? ಇವತ್ತಿನ ದಿವಸ ನೀವು ಅವರಿಗೆ ಐದು ಕೋಟಿ ರೂಪಾಯಿ ಕೊಡವುದಕ್ಕೆ ಆಗಲಿಲ್ಲ. ಅದರಿಂದ ಫೆಡರೇಷನ್‌ನಿಂದ ಹೆಚ್ಚಿಗೆ ಪರ್ಚೇಸ್ ಮಾಡುವುದಕ್ಕೆ ಆಗಲಿಲ್ಲ. ಅವರ ಕಡೆಯಿಂದ ರೊಕ್ಕ ಇಲ್ಲ ಎಂದರೆ ಹೇಗೆ ಪರ್ಚೇಸ್ ಮಾಡುತ್ತಾರೆ? ಆದ ಕಾರಣ ತುರ್ತು ಕ್ರಮ ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ಹೇಳಬೇಕು. ಇವತ್ತಿನ ದಿವಸ ಇದು ಕೋಟ್ಯಾಂತರ ರೈತರಿಗೆ ಅನ್ಯಾಯ ಮಾಡುವಂತಹದು ಆಗಿದೆ. ನೀವು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈ ಅಧಿವೇಶನ ಮುಗಿಯುವುದರೊಳಗೆ ಹತ್ತಿ ಬೆಳೆಗಾರರ, ಒಂದು ಸಭೆಯನ್ನು ಕರೆದು ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಫೆಡರೇಷನ್‌ನವರಿಂದ ಏನಾದರೂ ಸಹಾಯ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲಿಸುತ್ತೇನೆ. ಹಾಗೇನಾದರೂ ಸಾಧ್ಯ ಆಗದೇ ಇದ್ದರೆ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಅವರ ಬೆಂಬಲವನ್ನು ತೆಗೆದುಕೊಂಡು ಇದನ್ನು ಮಾಡಬೇಕಾಗುತ್ತದೆ. ಇದು ಅಷ್ಟು ಸುಲಭ ಅಲ್ಲ ; ಈಗ ಏನೂ ಹೇಳುವುದಕ್ಕೆ ಆಗುವುದಿಲ್ಲ. ನಮ್ಮ ಸ್ನೇಹಿತರ ಜೊತೆ ಸಮಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸರ್ಕಾರದವರು ಫೆಡರೇಷನ್‌ನವರಿಗೆ ದುಡ್ಡು ಕೊಟ್ಟರೆ ಫೆಡರೇಷನ್‌ನವರು ಖರೀದಿ ಮಾಡುವುದಕ್ಕೆ ತಯಾರಿದ್ದಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಹತ್ತಿಯನ್ನು ಯಾವ ರೀತಿ ಖರೀದಿ ಮಾಡುತ್ತಾರೆ ಎಂಬುದನ್ನು ಮೊದಲು ಹೇಳಬೇಕು. ಏಕೆಂದರೆ 700ರಿಂದ 2500ರವರೆಗೆ ಹತ್ತಿ ಧಾರಣೆ ಎಂದು ಹೇಳುತ್ತೀರಿ. ವರ್ಗೀಕರಣ ಯಾವ ರೀತಿ ಮಾಡುತ್ತಾರೆ ಎಂಬುದನ್ನು ಹೇಳಬೇಕು. ಯಾವ ಪೇಟೆಯೊಳಗೂ ಸ್ಪೇಪಲ್ ಲೆಂಗ್ತ್ ಮೇಲೆ ಖರೀದಿ ಮಾಡುವಂತಹ ಪದ್ಧತಿ ಇಲ್ಲ. 700-800 ರೂ.ಗಳಿಗೆ ಖರೀದಿ ಮಾಡುತ್ತಾರೆ. ಇದಕ್ಕೆ ಏನಾದರೂ ಪರಿಹಾರ ಹೇಳುತ್ತೀರಾ? ಬೇಕೆಂತಲೇ ಖರೀದಿದಾರರು ಏನು ಮಾಡುತ್ತಾರೆಂದರೆ ಎರಡು ಅಡಿಗೆ ಮೂರು ಸಾವಿರ ರೇಟ್ ಹಾಕುತ್ತಾರೆ ; ಉಳಿದ ಸಾವಿರ ಅಡಿಗಳಿಗೆ 600 ರೂಪಾಯಿ ರೇಟ್ ಹಾಕುವ ಪದ್ಧತಿ ಇದೆ. ಗುಣಮಟ್ಟ ವರ್ಗೀಕರಣ ಮಾಡಿ ; ವರ್ಗೀಕರಣದ ಆಧಾರದ ಮೇಲೆ ಏನಾದರೂ ಖರೀದಿ ಮಾಡುವಂತಹ ಕಾನೂನು ಸರ್ಕಾರ ಮಾಡುತ್ತದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅವರು ಹೇಳಿದ ಕೂಡಲೇ ಈ ಪ್ರಶ್ನೆಗಳಿಗೆ ನೇರವಾಗಿ ಉತ್ತರ ಕೊಡುವ ಬದಲು ಹತ್ತಿ ಬೆಳೆಯತಕ್ಕ, ಹತ್ತಿ ವ್ಯವಸಾಯ ಮಾಡತಕ್ಕ ಸ್ನೇಹಿತರನ್ನು ಕರೆದು ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಈ ಅಧಿವೇಶನ ಪೂರ್ತಿ ಆಗುವುದರೊಳಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ : – ಚನ್ನಪಟ್ಟಣದಲ್ಲಿ ಭೂಸಾರ ಪರೀಕ್ಷಣಾ ಪ್ರಯೋಗಾಲಯ ತೆರೆಯುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 125(415)

ಶ್ರೀ ಸಾದತ್ ಅಲಿಖಾನ್(ಚನ್ನಪಟ್ಟಣ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ)ಚನ್ನಪಟ್ಟಣ ತಾಲ್ಲೂಕಿನಲ್ಲಿ ಮಣ್ಣು ಆರೋಗ್ಯ ಕೇಂದ್ರವನ್ನು ತೆರೆಯಲು ಸರ್ಕಾರದ ಮುಂದೆ ಯಾವುದಾದರೂ ಪ್ರಸ್ತಾವನೆ ಇದೆಯೇ.

ಆ)ಹಾಗಿದ್ದಲ್ಲಿ, ಇದು ಯಾವಾಗ ತೆರೆಯಲಾಗುವುದು?

ಶ್ರೀ ಎನ್ ಹುಚ್ಚಮಾಸ್ತಿಗೌಡ (ಕೃಷಿ ಸಚಿವರು)

ಇಲ್ಲ

ಉದ್ಭವಿಸುವುದಿಲ್ಲ

ಶ್ರೀ ಸಾದತ್ ಅಲಿಖಾನ್ : ಮಾನ್ಯ ಅಧ್ಯಕ್ಷರೆ, ಚನ್ನಪಟ್ಟಣ ತಾಲ್ಲೂಕಿನಲ್ಲಿ ಮಣ್ಣು ಪರೀಕ್ಷಾ ಕೇಂದ್ರವನ್ನು ತೆರೆಯಬೇಕೆಂದು ಮಾನ್ಯ ಸಚಿವರು ಚನ್ನಪಟ್ಟಣಕ್ಕೆ ಸಭೆಯೊಂದರಲ್ಲಿ ಭಾಗವಹಿಸಲು ಬಂದಿದ್ದಾಗ ಒಂದು ಮನವಿ ಪತ್ರವನ್ನು ಕೊಟ್ಟಿದ್ದೆ. ಅದೇ ರೀತಿ ಅಲ್ಲಿ ಮಣ್ಣು ಪರೀಕ್ಷಾ ಕೇಂದ್ರವನ್ನು ತೆರೆಯುವುದಾಗಿ ಪ್ರಮಾಣ ಮಾಡಿದ್ದಿರಿ. ಇದಕ್ಕೆ ಖರ್ಚು ಸಹ ಜಾಸ್ತಿಯಾಗುವುದಿಲ್ಲ. ಈಗ 6,000 7,000 ಸಾಯಿಲ್ ಟೆಸ್ಟಿಂಗ್ ಸ್ಯಾಂಪಲ್‌ಗಳು ಬೆಂಗಳೂರಿಗೆ ಬರುತ್ತಿದೆ. ಆದುದರಿಂದ, ಚನ್ನಪಟ್ಟಣದಲ್ಲಿರುವ ಕೃಷಿ ಇಲಾಖೆಯಲ್ಲಿಯೇ ಮಣ್ಣು ಪರೀಕ್ಷಾ ಕೇಂದ್ರವನ್ನು ತೆರೆಯಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಒಂದೊಂದು ಮಣ್ಣು ಪರೀಕ್ಷಾ ಕೇಂದ್ರವಿದೆ. ಇದರ ಜೊತೆಗೆ ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರ ಸಹ ಇದೆ. ಇವೆರಡು ಇರುವಂಥ ಸಂದರ್ಭದಲ್ಲಿ ಇದರ ಅವಶ್ಯಕತೆ ಇನ್ನೂ ಎಷ್ಟು ಬೇಕಾಗುತ್ತದೆಂದು ತಿಳಿದುಕೊಂಡು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸುತ್ತೇನೆ, ನಾನು ಏನು ಯೋಚನೆ ಮಾಡಿದ್ದೇನೆಂದರೆ, ಮಣ್ಣು ಪರೀಕ್ಷಾ ಕೇಂದ್ರವನ್ನು ರೆವಿನ್ಯೂ ಸಬ್ ಡಿವಿಜನ್‌ಗೊಂದರಂತೆ ತೆರೆಯುವುದು ಅವಶ್ಯಕವೇ ಎಂಬುದನ್ನೂ ಸಹ ತಿಳಿದುಕೊಂಡು ಇನ್ನೂ ಹೆಚ್ಚು ಮಣ್ಣು ಪರೀಕ್ಷಾ ಕೇಂದ್ರಗಳನ್ನು ತೆರೆಯುವ ಅವಶ್ಯಕತೆ ಕಂಡುಬಂದರೆ ಇದರ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳವ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು.

ವಿಷಯ : - ಬಸವಕಲ್ಯಾಣ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 126(543)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್(ಬಸವಕಲ್ಯಾಣ)

ವಿಷಯ : - ಬಸವಕಲ್ಯಾಣ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ.

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?